(63)

**ಕರ್ನಾಟಕ ಸರ್ಕಾರ**

ಆಯುಕ್ತರ ಕಚೇರಿ,
ಭೂಮಾಪನ, ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ
ಕೆ.ಆರ್.ವೃತ್ತ, ಬೆಂಗಳೂರು-560 001,
ದೂರವಾಣಿ: 91-080-22212408
ಫ್ಯಾಕ್ಸ್: 91-080-22277528

---

ಸಂ: ತಾಂ.ಪಿ.ಎಂ.ಯು.5/2009-2010 ದಿನಾಂಕ: 14-10-2009.

**ಸುತ್ತೋಲೆ**

**ವಿಷಯ:** ಆರ್.ಟಿ.ಸಿ.ಗಳಲ್ಲಿ ಗ್ರಾಮ ಲೆಕ್ಕಿಗರು ನಿಯಮ ಬಾಹಿರವಾಗಿ/ತಪ್ಪಾಗಿ ಸರ್ವೆ ನಂಬರ್‌ಗಳನ್ನು ನೀಡಿರುವುದು ಕಂಡು ಬಂದಾಗ ಅನುಸರಿಸಬೇಕಾದ ಕ್ರಮಗಳು.

***

ಬೆಳಗಾವಿ ವಿಭಾಗದಲ್ಲಿ ಗ್ರಾಮ ಲೆಕ್ಕಿಗರಿಂದ ಬರೆಯಲ್ಪಡುವ ಆರ್.ಟಿ.ಸಿ.ಗಳಲ್ಲಿ ಬೇರೆ ಬೇರೆ ಸರ್ವೆ ನಂಬರುಗಳನ್ನು ಅನುಕೂಲಕ್ಕೆ ತಕ್ಕಂತೆ ಒಂದೂಗೂಡಿಸಿ ಅವರ ಇಚ್ಛೆಯಂತೆ ನಂಬರು ನೀಡುತ್ತಿರುವುದು ಗಮನಕ್ಕೆ ಬಂದಿರುತ್ತದೆ.

ಉದಾಹರಣೆಗೆ: 10/2ಎ, 10/2ಬಿ ಮತ್ತು 10/1 ಎಂಬ ಸರ್ವೆ ನಂಬರು ಒಂದೇ ಇದ್ದು, ಈ ಪೈಕಿ 10/1ರ ಮಾಲೀಕನಿಗೆ ಸ.ನಂ.10/2 ನ್ನು ಮಾರಾಟವಾದ ಸಾಂದರ್ಭದಲ್ಲಿ 10/1+2ಎ ನಂಬರು ನೀಡಿ ಪಹಣಿಯನ್ನು ಸೃಷ್ಟಿ ಮಾಡಲಾಗುತ್ತಿದೆ. ಈ ರೀತಿ ಎರಡು ನಂಬರುಗಳನ್ನು ಸೇರಿಸಿ ಹೊಸದಾದ ಆರ್.ಟಿ.ಸಿ.ಸೃಷ್ಟಿ ಮಾಡುವುದು ನಿಯಮಾನುಸಾರ ಸರಿಯಾದ ಕ್ರಮವಲ್ಲ.

ಈ ರಿತಿ ಸೃಷ್ಠಿಯಾದ ಆರ್.ಟಿ.ಸಿ.ಗಳು ಪ್ರಸ್ತುತ 11ಇ ನಕ್ಷೆಗಳ ನಿರ್ವಹಣೆಯಲ್ಲಿ ತೊಂದರೆಗಳನ್ನು ಉಂಟು ಮಾಡುತ್ತಿದೆ. ಆರ್.ಟಿ.ಸಿ.ಯಲ್ಲಿ ಈ ರೀತಿ ಸೇರ್ಪಡೆ ಮಾಡಿ ನೀಡಿದ ಬಹಳಷ್ಟು ಸ.ನಂಬರಗಳಿಗೆ ಸಂಬಂಧಿಸಿದಂತೆ ಯಾವುದೇ ಟಿಪ್ಪಣಿ, ಪಕ್ಕಾ ಮತ್ತು ಅಟ್ಲಾಸುಗಳಂತಹ ಮೂಲ ಸರ್ವೆ ದಾಖಲೆಗಳು ಲಭ್ಯವಿರುವುದಿಲ್ಲ. ಇಂತಹ ಆರ್.ಟಿ.ಸಿಗಳಿಗೆ ಸಂಬಂಧಿಸಿದಂತೆ 11ಇ ನಕ್ಷೆಗಾಗಿ ಕೋರಿಕೆ ಬಂದಾಗ ಮೂಲ ದಾಖಲೆಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಜಮೀನಿಗೆ ಹೋಗಿ ಅಳತೆ ಮಾಡಲು ಪರವಾನಗಿ ಭೂಮಾಪಕರವರಿಗೆ ಸಾಧ್ಯವಾಗುವುದಿಲ್ಲ.

ಈ ಅಂಶಗಳನ್ನು ಪರಿಶೀಲಿಸಿ ಇಂತಹ ಸಂದರ್ಭಗಳಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಂಡು ನಿರ್ವಹಿಸಬಹುದಾಗಿರುತ್ತದೆ.

1) ಮೇಲೆ ತಿಳಿಸಿದಂತಹ ಪ್ರತಿಯೊಂದ ಆರ್.ಟಿ.ಸಿಗಳು 11ಇ ನಕ್ಷೆಗಾಗಿ ಸ್ವೀಕೃತವಾದಾಗ ಯಾವ ಯಾವ ಸರ್ವೆ ನಂಬರಗಳನ್ನು ಗ್ರಾಮ ಲೆಕ್ಕಿಗರಿಂದ ನಿಯಮ ಬಾಹಿರವಾಗಿ ಸೃಷ್ಠಿಸಲ್ಪಟ್ಟಿದೆ ಎಂದು ತಿಳಿದುಕೊಳ್ಳಬೇಕು.

RD-1/Circular
SM

ನಂ ....
16/10/09

9L-FH39/09-10

ಉದಾಹರಣೆ: ಮೇಲೆ ತಿಳಿಸಿದ ಪ್ರಕರಣಗಳಲ್ಲಿ ಸ.ನಂ.10/1 ಮತ್ತು 10/2ಎ ನಿಯಮ ಬಾಹಿರವಾಗಿ ಹಾಗೂ ತಪ್ಪಾಗಿ ಒಂದುಗೂಡಿಸಿ ಒಂದೇ ಸ.ನಂಬರಾಗಿ ನಮೂದಿಸಲ್ಪಟ್ಟಿದೆ. ಭೂಮಾಪನ ಕಛೇರಿಯಲ್ಲಿ ಸ.ನಂ.10/1 ಮತ್ತು 10/2ಎ ಎರಡೂ ಸ.ನಂಬರಗಳ ದಾಖಲೆಗಳು ಲಭ್ಯವಿರುತ್ತವೆ. 2 ನಂಬರುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಅಳತೆ ಮಡುವ ಪರವಾನಗಿ ಭೂಮಾಪಕರಿಗೆ ಒದಗಿಸುವುದು.

2) ಜಮೀನಿಗೆ ಅಳತೆ ಮಾಡಲು ಭೇಟಿ ನೀಡಿದ ಪರವಾನಗಿ ಭೂಮಾಪಕರು ಮಾರಾಟಕ್ಕೆ ಉದ್ದೇಶಿಸಿರುವ ಪ್ರದೇಶವು ಯಾವ ಸ.ನಂಬರನಲ್ಲಿ ಅಂದರೆ 10/1 ಅಥವಾ 10/2ಎ ನಲ್ಲಿ ಬರುತ್ತದೆಂದು ಕಂಡುಹಿಡಿದು ಅದರಂತೆ ಸ್ಕೆಚ್ ತಯಾರಿಸಬೇಕು. ಮಾರಾಟಕ್ಕೆ ಉದ್ದೇಶಿಸಿರುವ ಪ್ರದೇಶ ಭಾಗಶ:ವಾಗಿ ಸ್ವಲ್ಪ ಭಾಗ ಸ.ನಂ.10/1 ರಲ್ಲಿ ಉಳಿದ ಭಾಗ 10/2 ಎ ಯಲ್ಲಿ ಬರುವಂತಿದ್ದರೆ(ಪರವಾನಗಿ ಭೂಮಾಪಕರು 2 ಸ್ಕೆಚ್‌ಗಳನ್ನು ಅಂದರೆ 10/1 ರಲ್ಲಿ ಒಂದು 10/2ಎ ರಲ್ಲಿ ಮತ್ತೊಂದು ಸ್ಕೆಚ್ ತಯಾರು ಮಾಡಿ ನಿಖರವಾದ ಸ್ಕೆಚ್) ಎರಡೂ ಸ.ನಂ.ಗಳಲ್ಲಿ ಕ್ರಮವಾಗಿ ವಿಸ್ತೀರ್ಣವನ್ನು ತೋರಿಸಬೇಕು.

3) ಕಛೇರಿಯಲ್ಲಿ ನಿರ್ವಹಿಸಬೇಕಾದ ಕೆಲಸಗಳು:-

(ಎ) ಸ.ನಂ.10/1+2ಎ ಆರ್.ಟಿ.ಸಿ.ಯನ್ನು ಸ.ನಂ.10/1 ಮತ್ತು 10/2ಎ ಎಂದು ಬೇರ್ಪಡಿಸಬೇಕು. ಸ.ನಂ.10/1+2ಎ ಆರ್.ಟಿ.ಸಿ.ಯು ನಿಯಮಬಾಹಿರವಾಗಿ 2 ಸ.ನಂ.ಗಳನ್ನು ಸೇರಿಸಿ ಗ್ರಾಮ ಲೆಕ್ಕಿಗರು ಮಾಡಿರುವಂತಹ ಕಾರ್ಯವಾಗಿರುವುದರಿಂದ ಯಾವುದೇ ಮ್ಯುಟೇಶನ್ ಅಗತ್ಯವಿರುವುದಿಲ್ಲ. ಸದರಿ ಕಾರ್ಯಕ್ಕಾಗಿ ಭೂಮಿ ಶಾಖೆಯಿಂದ ಸರಳ ತಂತ್ರಾಂಶ(Software) ಒದಗಿಸಲಾಗುವುದು.

(ಬಿ) "ಭೂಮಿ" ಶಾಖೆಯಲ್ಲಿ ಈ ರೀತಿ ಸ.ನಂ.ಗಳನ್ನು ಬೇರ್ಪಡಿಸಿದ ನಂತರ ಕಂಡಿಕೆ (2)ರಲ್ಲಿ ವಿವರಿಸಿರುವಂತೆ 11ಇ ಸ್ಕೆಚ್ ಅನ್ನು ತಯಾರಿಸಿ, ಸಾರ್ವಜನಿಕರಿಗೆ ವಿತರಿಸಬಹುದಾಗಿದೆ.

ಈ ಮೇಲಿನಂತೆ ಕ್ರಮ ಕೈಗೊಳ್ಳುವುದು ಸ.ನಂ.10/1+2ಎ ಯ ಖರಾಬು ವಿಸ್ತೀರ್ಣವನ್ನು ಒಳಗೊಂಡ ಒಟ್ಟು ವಿಸ್ತೀರ್ಣದ ವಿವರವು ಸ.ನಂ.10/1 ಮತ್ತು 10/2ಎ ಯ ವಿಸ್ತೀರ್ಣದ ವಿವರಕ್ಕೆ ಹೊಂದಾಣಿಕೆ ಇದ್ದಲ್ಲಿ ಮಾತ್ರ ಸಾಧ್ಯವಾಗುತ್ತದೆ. ಒಂದು ವೇಳೆ ಸ.ನಂ.10/1 ಮತ್ತು 10/2ಎ ಯ ವಿಸ್ತೀರ್ಣವನ್ನು ಸೇರಿಸಿದಾಗ ಬರುವ ವಿಸ್ತೀರ್ಣ, 10/1 + 2ಎ ವಿಸ್ತೀರ್ಣಕ್ಕೆ ವ್ಯತ್ಯಾಸವಿದ್ದಲ್ಲಿ, ಮೊದಲಿಗೆ ಅಂತಹ ವಿಸ್ತೀರ್ಣವನ್ನು ಉಪ ವಿಭಾಗಾಧಿಕಾರಿಗಳ ಆದೇಶದ ಮೇರೆಗೆ ತಿದ್ದುಪಡಿ ಮಾಡಿದ ನಂತರವೇ ಮೇಲೆ 1 ರಿಂದ 3 ರ ಅಂಶಗಳಲ್ಲಿ ಸೂಚಿಸಿದಂತೆ ಕ್ರಮ ಕೈಗೊಳ್ಳುವುದು.

ಅನೇಕ ಸಂದರ್ಭಗಳಲ್ಲಿ ಇಂತಹ ಸ.ನಂ.ಗಳು (10/1+2ಎ) ಗಳು ಭೂಮಾಪನ ಇಲಾಖೆಯಲ್ಲೇ ಸೃಷ್ಠಿಯಾಗಿರುವ ಪ್ರಕರಣಗಳು ಇರುತ್ತವೆ. ಇಂತಹ ಪ್ರಕರಣಗಳನ್ನು ಸುಲಭವಾಗಿ ಆಕಾರಬಂದು ಪರಿಶೀಲನೆಯಿಂದ ಕಂಡು ಹಿಡಿಯಬಹುದು. ಆಕಾರಬಂದಿನಲ್ಲಿ ಇಂತಹ ಸ.ನಂ.ನಮೂದಾಗಿದ್ದರೆ ಮೇಲೆ 1 ರಿಂದ 3 ಅಂಶಗಳಲ್ಲಿ ತಿಳಿಸಿರುವಂತೆ ಕ್ರಮಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲ. ಸದರಿ ಸ.ನಂಬರಿಗೆ (10/1+2ಎ) ಸಂಬಂಧಿಸಿದ ನಕ್ಷೆ ಮತ್ತು ಇತರೆ ದಾಖಲೆಗಳನ್ನು ಪರವಾನಗಿ ಭೂಮಾಪಕರಿಗೆ ನೇರವಾಗಿ ಒದಗಿಸಿದಲ್ಲಿ, ಪರವಾನಗಿ ಭೂಮಾಪಕರು ಭೂಮಾಪನ ಕಛೇರಿಯಲ್ಲಿ ಲಭ್ಯವಿರುವ ಇಂತಹ ಟಿಪ್ಪಣಿ/ಪಕ್ಕಾಗಂತಹ ದಾಖಲೆಗಳ ಆಧಾರದ ಮೇಲೆ ಕೆಲಸ ನಿರ್ವಹಿಸುವರು. ಆದರೆ, ಪ್ರಕರಣಗಳನ್ನು ಪರವಾನಗಿ ಭೂಮಾಪಕರಿಗೆ ಅಳತೆಗೂ ವಿತರಿಸುವ ಮುನ್ನ ಆರ್.ಟಿ.ಸಿ.ಯ ವಿಸ್ತೀರ್ಣವು ಆಕಾರಬಂದಿಗೆ ತಾಳೆ ಇದೆಯೇ ಎಂಬ ಬಗ್ಗೆ ಸಾಮಾನ್ಯ ಪರಿಶೀಲನೆಯನ್ನು

ಮಾಡಬೇಕು. ಯಾವುದೇ ವ್ಯತ್ಯಾಸವಿದ್ದಲ್ಲಿ ಅದನ್ನು ತಿದ್ದುಪಡಿ ಮಾಡುವ ಬಗ್ಗೆ ಉಪ ವಿಭಾಗಾಧಿಕಾರಿಗಳ ಆದೇಶವನ್ನು ಪಡೆಯಬೇಕಾಗಿರುತ್ತದೆ.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.
1.10.20

ಪ್ರತಿಯನ್ನು:

1) ಎಲ್ಲಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳಿಗೆ ಮಾಹಿತಿಗಾಗಿ.
2) ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3) ಎಲ್ಲಾ ಭೂದಾಖಲೆಗಳ ಉಪ ನಿರ್ದೇಶಕರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ಎಲ್ಲಾ ತಹಶೀಲ್ದಾರ್‌ಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಪ್ರಾಚಾರ್ಯರು, ಭೂಮಾಪನ ತರಬೇತಿ ಸಂಸ್ಥೆ, ಮೈಸೂರು / ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ.
7) ಈ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
8) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
9) ಕೇಂದ್ರ ಕಛೇರಿಯ ಎಲ್ಲಾ ಶಾಖೆಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
10) ಅಧ್ಯಕ್ಷರು, ಕರ್ನಾಟಕ ರಾಜ್ಯ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಕಾರ್ಯನಿರ್ವಾಹಕ ಸಂಘ, ಬೆಂಗಳೂರು.
11) ಅಧ್ಯಕ್ಷರು, ಕರ್ನಾಟಕ ರಾಜ್ಯದ ಪರವಾನಗಿ ಭೂಮಾಪಕರ ಸಂಘ, ಮಹಾವೀರ ಕಾಂಪ್ಲೆಕ್ಸ್, ಕೆ.ಜಿ. ರೋಡ್, ಬೆಂಗಳೂರು